ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳು

1912 (3091); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಕಳೆದ 2011–12, 2012–13 ಮತ್ತು 2013–14ನೇ ಸಾಲಿನಲ್ಲಿ ಅಭಿವೃದ್ಧಿ ನಿಗಮದಿಂದ ಯಾವ ಯಾವ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ ನೀಡುವುದು; (ಸಂಪೂರ್ಣ ಫಲಾನುಭವಿಗಳ ಪಟ್ಟಿ ಸಮೇತ ವಿವರ ನೀಡುವುದು)

ಆ) 2011–12, 2012–13 ಮತ್ತು 2013–14 ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸಹಾಯಧನ ಅಥವಾ ಇತರೆ ವಿವಿಧ ಸೌಲಭ್ಯ ಈ ತನಕ ಮಂಜೂರು ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗಡೆ ಸಹಾಯಧನ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುವುದು; (ವಿವಿಧ ನೀಡುವುದು);

ಈ) ಕ್ಷೇತ್ರದ ಫಲಾನುಭವಿಗಳಿಗೆ ಬ್ಯಾಂಕಿನಿಂದ ದೊರೆಯುವ ಸಾಲದ ಗುರಿಯ ಅನುಮೋದನೆ ಪತ್ರ ಸಕಾಲಕ್ಕೆ ನಿಗಮದಿಂದ ಬ್ಯಾಂಕಿನವರಿಗೆ ನೀಡದಿರುವುದುರಿಂದ ಫಲಾನುಭವಗಳು ಗೊಂದಲಪಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) 2011–12, 2012–13 ಮತ್ತು 2013–14ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ನೀಡುವುದು; ಈ ಸಾಲಿನ ಆಯ್ಕೆಯಾದ ಫಲಾನುಭವಿಗಳಿಗೆ ಈ ತನಕ ಕೊಳವೆ ಬಾವಿಗಳನ್ನು ಕೊರೆಯದಿರಲು ಕಾರಣಗಳೇನು;

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಚಿಂತಾಮಣಿ ವಿಧಾನ ಸಭಾ ಕ್ಷೇತ್ರದ ಮಾಹಿತಿಯು ಅನುಬಂಧ "ಅ" ರಲ್ಲಿ ಲಗತ್ತಿಸಿದೆ ಹಾಗೂ ಫಲಾನುಭವಿಗಳ ಪಟ್ಟಿ ಲಗತ್ತಿಸಿದೆ.

(ವಿವರಗಳು ಸುಮಾರು 40 ಪುಟಗಳು ಇರುವುದರಿಂದ ಮಾನ್ಯ ಸದಸ್ಯರಿಗೆ ಮಾತ್ರ ಲಗತ್ತುಗಳನ್ನು ಕಳುಹಿಸಿದೆ)

ಆ) ನಿಗಮದ ಯೋಜನೆಗಳಲ್ಲಿ ಯಾವುದೇ ಪ್ರಸ್ತಾವನೆಯು ಬಿಡುಗಡೆಗಾಗಿ ಬಾಕಿ ಇರುವುದಿಲ್ಲ.

ಇ) ಅನ್ವಯಿಸುವುದಿಲ್ಲ

ಈ) 2013–14ನೇ ಸಾಲಿನಲ್ಲಿ ಫಲಾನುಭವಿಗಳಿಗೆ ನೇರವಾಗಿ ಅವರ ಖಾತೆಗೆ ಸಾಲದ ಮೊತ್ತವನ್ನು RTGS / NEFT ಮುಖಾಂತರ ಜಮಾ ಮಾಡಲು ನಿಗಮವು ಕ್ರಮ ವಹಿಸಿರುತ್ತದೆ. ಈ ಸಂಬಂಧ ಫಲಾನುಭವಿಗಳು ಅವರ ಬ್ಯಾಂಕಿನ ವಿವರಗಳನ್ನು ಸೂಕ್ತವಾಗಿ ಸಲ್ಲಿಸಿರುವ ಕಾರಣ ಮತ್ತು ಫಲಾನುಭವಿಗಳ ಬ್ಯಾಂಕಿನ ಖಾತೆ ಚಾಲ್ತಿಯಲ್ಲಿರುದ ಕಾರಣ ಸಾಲದ ಮೊತ್ತವನ್ನು ಅವರ ಖಾತೆಗೆ ಜಮಾ ಆಗಿರುವುದಿಲ್ಲ ಅಂತಹ ಪ್ರಕರಣಗಳಿಗೆ ನಿಗಮವು ಪುನಃ ಚೆಕ್ಕನ್ನು ವಿತರಿಸಲು ಕ್ರಮವನ್ನು ವಹಿಸಲಾಗಿದೆ.

ಉ) ಪಟ್ಟಿಲಗತ್ತಿಸಿದೆ. 2011–12ನೇ ಸಾಲನ ಕೊಳವೆ ಬಾವಿ ಕೊರೆಯಲಾಗಿದೆ. 2012–13ನೇ ಸಾಲಿನ ಟೆಂಡರ್ ಆಯ್ಕೆ ಪ್ರಕ್ರಿಯೆ ತಡವಾಗಿ ಪೂರ್ಣ ಗೊಂಡಿರುತ್ತದೆ ಹಾಗೂ ಕೊಳವೆ ಬಾವಿ ಕೊರೆಯಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲಾಗಿದ್ದು ಸದರಿ ಗುತ್ತಿಗೆ ದಾರರು ಕೊಳವೆ ಬಾವಿಗಳನ್ನು ಕೊರೆದಿರುವುದಿಲ್ಲ ಹಾಗೂ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ನಿಯಮಾನುಸಾರ ಸದರಿ ಗುತ್ತಿಗೆ ದಾರರಿಗೆ ನೋಟೀಸ್ ನೀಡಲಾಗಿದೆ. 2013–14ನೇ ಸಾಲಿನ ಆಯ್ಕೆ ಪ್ರಕ್ರಿಯೆ ಕಾರ್ಯ ಪ್ರಗತಿಯಲ್ಲಿದೆ.